533(558) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಳ್ತಂಗಡಿಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು,

ಆ) ಅವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು, ಅವುಗಳನ್ನು ತುಂಬಲು ಸರ್ಕಾರದ ಕ್ರಮಗಳೇನು,

ಇ) ತಾಲ್ಲೂಕು ಕೇಂದ್ರದ ಈ ಕಾಲೇಜಿಗೆ ಮಂಜೂರಾದ ಜಮೀನಿನ ವಿಸ್ತೀರ್ಣ ಎಷ್ಟು, ಸರ್ವೆ ನಂಬರ್ ಇತ್ಯಾದಿ ವಿವರಗಳನ್ನು ತಿಳಿಸುವುದು,

ಈ) ಈ ಜಮೀನಿಗೆ ಸೂಕ್ತ ರಕ್ಷಣಾ ಗೋಡೆ ನಿರ್ಮಾಣ ಕಾರ್ಯಕ್ಕಾಗಿ ಸರ್ಕಾರದ ಕ್ರಮಗಳೇನು, ಮಂಜೂರಾದ ಜಮೀನಿನಲ್ಲಿ ಅಕ್ರಮಣಗಳು ಇವೆಯೇ,

ಉ) ಇದ್ದಲ್ಲಿ, ಆ ಕುರಿತು ವಿವರಗಳು ಹಾಗೂ ಅಕ್ರಮಣ ತೆರವಿಗಾಗಿ ಸರ್ಕಾರದ ಕ್ರಮಗಳೇನು?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಬೆಳ್ತಂಗಡಿಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ 9 ಬೋದಕ ಮತ್ತು 8 ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತದೆ

ಆ) 1 ಗ್ರಂಥಪಾಲಕರು, 1 ಅಧೀಕ್ಷಕರು, 1 ಪ್ರಥಮ ದರ್ಜೆ ಸಹಾಯಕರು, 1 ಗ್ರಂಥಾಲಯ ಸಹಾಯಕರು ಹಾಗೂ 1 ಪರಿಚಾರಕರ ಹುದ್ದೆ ಖಾಲಿ ಇದ್ದು ಈ ಹುದ್ದೆಗಳನ್ನು ಬಡ್ತಿ ನೀಡುವ ಮೂಲಕ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತದೆ

ಇ) ಸದರಿ ಕಾಲೇಜಿಗೆ ಸರ್ವೆ ನಂ 109/2ರಲ್ಲಿ 5 92 ಎಕರೆಗಳು ಹಾಗೂ 107/1ಎ ರಲ್ಲಿ 4 05 ಎಕರೆ ಇದ್ದು, ಒಟ್ಟು 9 97 ಎಕರೆ ಜಮೀನು ಮಂಜೂರಾಗಿರುತ್ತದೆ

ಈ) ರಕ್ಷಣ ಗೋಡೆ ನಿರ್ಮಾಣಕ್ಕಾಗಿ ರೂ 10 00 ಲಕ್ಷಗಳ ಅನುದಾನವನ್ನು ನೀಡಲಾಗಿದೆ ಕಾಲೇಜಿಗೆ ಮಂಜೂರಾದ ಜಮೀನಿನಲ್ಲಿ ಸ್ವಲ್ಪ ಮಟ್ಟಿನ ಜಮೀನು ಅತಿಕ್ರಮಣವಾಗಿರುತ್ತದೆ

ಉ) ಕಾಲೇಜಿನ ಜಮೀನಿನಲ್ಲಿ 40 ಸೆಂಟನಷ್ಟು ನಿವೇಶನವು ಬೆಳ್ತಂಗಡಿ ತಾಲ್ಲೂಕು ವಸತಿ ಯೋಜನೆಯ ಫಲಾನುಭವಿಗಳಿಂದ ಅತಿಕ್ರಮಣವಾಗಿದ್ದು, ಇದನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಕೋರಲಾಗಿದೆ

534(559) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಪ್ರೌಢ ಶಾಲೆಗಳ ಸಂಖ್ಯೆ ಮತ್ತು ಅವುಗಳಲ್ಲಿ ಖಾಲಿ ಇರುವ ಮುಖ್ಯೋಪಾಧ್ಯಾಯರ ಹುದ್ದೆಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ಪ್ರಸ್ತುತ ಇರುವ 75 25 ಅನುಪಾತದ ಬದಲು ನೂರಕ್ಕೆ ನೂರರಂತೆ ಬಡ್ತಿ ಮೂಲಕವೇ ತುಂಬುವ ಕುರಿತು ಸರ್ಕಾರದ ನಿಲುವುಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ತಾಲ್ಲೂಕುವಾರು ಒಟ್ಟು ಪ್ರೌಢ ಶಾಲೆಗಳ ಸಂಖ್ಯೆ ಮತ್ತು ಅವುಗಳಲ್ಲಿ ಖಾಲಿ ಇರುವ ಮುಖ್ಯೋಪಾಧ್ಯಾಯರುಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	ಒಟ್ಟು ಸರ್ಕಾರಿ ಪ್ರೌಢ ಶಾಲೆಗಳು	ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳು
1	ಮಂಗಳೂರು ನಗರ	05	04
2	ಮಂಗಳೂರು ತಾಲ್ಲೂಕು	24	23
3	ಬಂಟ್ವಾಳ	20	17
4	ಪುತ್ತೂರು	08	06
5	ಸುಳ್ಯ	10	08